## ನಿರಂಕುಶ ಪ್ರಭುತ್ವದ, ಸರ್ವಾಧಿಕಾರದ ದೇಶವಾಗಲು ಸೆನ್ಸಾರ್ ಸಾಧನ ಆಗಬಾರದು. ಈಗ ಆಗುತ್ತಿರುವುದು ಅದೇ.



ಅದನ್ನು ಖಾಸಗಿಯಾಗಿ ನೋಡುತ್ತಾನೆ. ಥಿಯೇಟರ್‌ನಲ್ಲಿ ನೂರಾರು ಜನ ಒಟ್ಟಿಗೆ ಕುಳಿತು ಸಿನಿಮಾ ವೀಕ್ಷಿಸುತ್ತಾರೆ. ಅಂತಹ ಸಂದರ್ಭದಲ್ಲಿ ಬೀರುವ ಪರಿಣಾಮ ಅಪಾರ. ಅದು ಇಡೀ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಹಿಂಸೆ ಹಾಗೂ ಲೈಂಗಿಕ ಪ್ರಚೋದನೆಗೆ ಅವಕಾಶ ಮಾಡಿಕೊಡುವ ಚಿತ್ರಗಳನ್ನು ಹೇಗಾದರೂ ಮಾಡಿ ನಿರ್ಬಂಧಕ್ಕೆ ಒಳಪಡಿಸಬೇಕು. ಆ ಕಾರಣಕ್ಕೆ ಸೆನ್ಸಾರ್ ಬೇಕು.

ಸೆನ್ಸಾರ್ ಮಂಡಳಿಗೆ 2–3 ವರ್ಷಕ್ಕೊಮ್ಮೆ ಹೊಸ ಸದಸ್ಯರ ನೇಮಕ ಮಾಡಲಾಗುತ್ತದೆ. ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡಿರಬೇಕು ಎಂಬುದೇ ನೇಮಕಕ್ಕೆ ಇರುವ ಏಕಮಾತ್ರ ಅರ್ಹತೆ. ಇದನ್ನು ಹೇಗೆ ಬೇಕಾದರೂ ವ್ಯಾಖ್ಯಾನಿಸಬಹುದು. ಸದಸ್ಯನಾಗುವವ ಒಳ್ಳೆಯ ನಿರ್ದೇಶಕ ಆಗಿರಬೇಕು ಎಂದು ಹೇಳುವುದಿಲ್ಲ. 5 ಸಿನಿಮಾಗಳ ನಿರ್ದೇಶನ ಮಾಡಿರಬೇಕು ಎಂದು ಷರತ್ತು ಇದೆ. 5 ಅಥವಾ 10 ಸಿನಿಮಾ ಮಾಡಿದವರು ಒಳ್ಳೆಯ ನಿರ್ದೇಶಕ ಎಂದು ಹೇಳಲು ಬರುವುದಿಲ್ಲ. ಸಾಧ್ಯವಾದರೆ ಮಂಡಳಿಯ ಸದಸ್ಯರಿಗೆ 3 ಅಥವಾ 5 ದಿನದ ತರಬೇತಿ ಶಿಬಿರ ಹಮ್ಮಿಕೊಳ್ಳಬೇಕು. ಒಳ್ಳೆಯ ಸಿನಿಮಾಗಳ ನಿರೀಕ್ಷೆಗಳು ಏನು ಎಂಬುದನ್ನು ಮನಮುಟ್ಟುವಂತೆ ಹೇಳಿಕೊಡಬೇಕು. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ ಮಾತ್ರ ಅಲ್ಲ, ಕೆಟ್ಟ ಸಿನಿಮಾಗಳೆಂದರೆ ಅಶ್ಲೀಲ ವ್ಯವಹಾರಕ್ಕೆ ಹಾಕಿದ ಹಣ ಎಂಬುದನ್ನು ಅವರಿಗೆ ತಿಳಿಸಿಕೊಡಬೇಕು.

ನಿರಂಕುಶ ಪ್ರಭುತ್ವದ, ಸರ್ವಾಧಿಕಾರದ ದೇಶವಾಗಲು ಸೆನ್ಸಾರ್ ಸಾಧನ ಆಗಬಾರದು. ಈಗ ಆಗುತ್ತಿರುವುದೂ ಅದೇ. ಒಂದು ರೀತಿಯ ಸಿದ್ಧಾಂತವನ್ನು, ಜೀವನಕ್ರಮವನ್ನು ಅವರು ನಿಯಂತ್ರಿಸಲು ಹೊರಟಿದ್ದಾರೆ. ಇದು ಅನೈತಿಕ ಪೊಲೀಸ್‌ಗಿರಿ.

ಸಾಕ್ಷ್ಯಚಿತ್ರಗಳಿಗೆ ಹೋಲಿಸಿದರೆ ರಾಜಕೀಯ ನಿಲುವಿನ ಚಲನಚಿತ್ರಗಳು ಬರುವುದು ಕಡಿಮೆ. ಇದೇ ಪರಿಸ್ಥಿತಿ ಮುಂದುವರಿದರೆ ಭವಿಷ್ಯದಲ್ಲಿ ಸಾಕ್ಷ್ಯಚಿತ್ರಗಳಿಗೆ ತೊಂದರೆ ಕೊಡಬಹುದು. ಪಟವರ್ಧನ್ ಅವರ ಸಿನಿಮಾವನ್ನು ನಿಷೇಧಿಸಿದಾಗ ಯಾರೂ ಗಲಾಟೆ ಮಾಡಿರಲಿಲ್ಲ. ನಾವು ಆಗ ಗಲಾಟೆ ಮಾಡಬೇಕಿತ್ತು.

ಈ ಹಿಂದೆ ಸೆನ್ಸಾರ್ ಮಂಡಳಿಯಲ್ಲಿ ಒಂದು ಪಕ್ಷಕ್ಕೆ ನಿಷ್ಠರಾದ, ಆಲೋಚನಾ ಕ್ರಮಕ್ಕೆ ನಿಷ್ಠರಾದ ಸದಸ್ಯರು ಇರಲಿಲ್ಲ. ಪ್ರತಿ ಸಮಿತಿಯಲ್ಲಿ ಒಬ್ಬರು ಅಥವಾ ಇಬ್ಬರು ರಾಜಕೀಯ ಹಿನ್ನೆಲೆಯವರು ಇರುತ್ತಿದ್ದರು. ಆಗ ಸ್ವಲ್ಪ ಮುಕ್ತ ಮಾರ್ಗ ಇತ್ತು. ಒಂದು ಚಿಂತನಾ ಕ್ರಮವೇ ಸರಿ ಎಂದು ಮಂಡಳಿಯ ಸದಸ್ಯರು ಹೇಳಲು ಹೊರಟಾಗ ಅಪಾಯ ಉಂಟಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸೆನ್ಸಾರ್ ಮಂಡಳಿ, ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿ ಸೇರಿದಂತೆ ಎಲ್ಲ ಕಡೆಗಳಲ್ಲಿ ರಾಜಕೀಯ ನೇಮಕಾತಿ ಆಗುತ್ತಿದೆ.

ಹೃಷಿಕೇಶ್ ಮುಖರ್ಜಿ ಅವರು ಒಂದು ವರ್ಷ ಸೆನ್ಸಾರ್ ಮಂಡಳಿಯ ಅಧ್ಯಕ್ಷರಾಗಿದ್ದರು. ಆಗ ಒಂದು ಸಣ್ಣ ಘಟನೆ ನಡೆಯಿತು. ಆಕ್ಷೇಪಾರ್ಹ ಎಂಬ ಕಾರಣಕ್ಕೆ ಸಿನಿಮಾವೊಂದರ ಕೆಲವು ದೃಶ್ಯಗಳನ್ನು ಕಟ್ ಮಾಡಿದರಂತೆ. ಮತ್ತೊಂದು ಸಲ ಯಾವುದೋ ಚಿತ್ರಕ್ಕೆ ಅವಕಾಶ ನೀಡಿದರಂತೆ. ಆಗ ಸದಸ್ಯರೊಬ್ಬರು, 'ಆಗ ಕಟ್ ಮಾಡಿದ್ದೀರಿ. ಈಗ ಬಿಟ್ಟಿದ್ದೀರಿ' ಎಂದು ಆಕ್ಷೇಪ ವ್ಯಕ್ತಪಡಿಸಿದರಂತೆ. 'ಎಲ್ಲವನ್ನೂ ರೂಲ್ಸ್ ಬುಕ್ ಪ್ರಕಾರ ಮಾಡಲು ಆಗಲ್ಲ. ಯಾವುದು ಕಲೆ ಆಗುತ್ತದೆ, ಯಾವುದು ಆಗಲ್ಲ ಎಂದು ತಿಳಿದುಕೊಳ್ಳುವ ವ್ಯವಧಾನ ನಮಗೆ ಇರಬೇಕು' ಎಂದು ಮುಖರ್ಜಿ ಅವರು ಗದರಿದರಂತೆ. 'ನಾನು ಸೆನ್ಸಾರ್ ಮಂಡಳಿಯ ಅಧ್ಯಕ್ಷನೇ ಹೊರತು ನಿಮಗೆ ಕಲೆ ಯಾವುದು ಎಂದು ಹೇಳಿಕೊಡುವ ಮೇಸ್ಟ್ರು ಅಲ್ಲ' ಎಂದೂ ತಿಳಿಸಿದರಂತೆ. ಈ ರೀತಿಯ ದೃಷ್ಟಿಕೋನ ಎಲ್ಲರಲ್ಲೂ ಇರಬೇಕು. ನಿಯಮದ ಪ್ರಕಾರವೇ ನಡೆದರೆ 'ಮಲೆಗಳಲ್ಲಿ ಮದುಮಗಳು', 'ಸಂಸ್ಕಾರ'ದಂತಹ ಶ್ರೇಷ್ಠ ಕಾದಂಬರಿಗಳ ಚಿತ್ರಗಳ ಪ್ರಮುಖ ದೃಶ್ಯಗಳಿಗೆ ಕತ್ತರಿ ಪ್ರಯೋಗ ಮಾಡಬೇಕಾಗುತ್ತದೆ. ಈ ಚಿತ್ರಗಳ ಉದ್ದೇಶ, ಸನ್ನಿವೇಶ ಅಪಾಯಕಾರಿ ಅಲ್ಲ. ಆದರೆ, ಬೇರೆ ಕಮರ್ಷಿಯಲ್ ಸಿನಿಮಾಗಳಲ್ಲಿ ಬರುವ ಲೈಂಗಿಕ ಪ್ರಚೋದನೆ ಹಾಗೂ ಹಿಂಸೆಯ ದೃಶ್ಯಗಳು ಉದ್ದೇಶದಲ್ಲಿ ಅಪಾಯಕಾರಿ.

ನಿರ್ದೇಶಕನ ಅಭಿಪ್ರಾಯ ಹರಣ, ಅಭಿವ್ಯಕ್ತಿ ಹರಣ ಮಾಡಲು ಹೊರಟರೆ ಸೆನ್ಸಾರ್ ವ್ಯವಸ್ಥೆಯನ್ನು ನಾವೆಲ್ಲ ಒಟ್ಟಾಗಿ ವಿರೋಧಿಸಬೇಕು. ಸೆನ್ಸಾರ್‌ಶಿಪ್ ಬೇಕು. ಆದರೆ, ಅದರ ವ್ಯಾಪ್ತಿಯ ಹರವನ್ನು ಸೀಮಿತಗೊಳಿಸಬೇಕು.

**(ನಿರೂಪಣೆ: ಮಂಜುನಾಥ ಹೆಬ್ಬಾರ್)**

■